ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಈ ಸದನದ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ಅವರ ಕಳಕಳಿ ಏನೆಂಬುದನ್ನು ನೀವು ಅರ್ಥ ಮಾಡಿಕೊಂಡಿದ್ದೀರಿ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ತರಬೇಕು. ಇದಕ್ಕೆ ಸೂಕ್ತವಾದಂತಹ ನಿರ್ಣಯವನ್ನು ತೆಗೆದುಕೊಳ್ಳುವಂಥಾದ್ದು ಅವರಿಗೆ ಬಿಟ್ಟಿದ್ದು. ಈಗ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿರುವಂತೆ, ನಿಯಮ 69ರ ಮೇಲಿನ ಚರ್ಚೆ ಏನು ಇದೆ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಅದಕ್ಕೆ ದಯಮಾಡಿ ತಾವುಗಳು ಅವಕಾಶವನ್ನು ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು : ಈಗ ಈ ಸಭೆಯನ್ನು ನಡೆಸಬೇಕೆಂದು ಇದ್ದಿರೋ, ನಡೆಸಬಾರದು ಎಂದು ಇದ್ದಿರೊ? ಈಗ ಮಾತಾಡುವುದಕ್ಕೆ ಅವಕಾಶ ಇದೆ. ಅದಕ್ಕೆ ಯೋಗ್ಯವಾದ ಉತ್ತರವನ್ನು ಕೊಡುತ್ತಾರೆ.. ದಯಮಾಡಿ ಕುಳಿತುಕೊಳ್ಳಿ, ಸಹಕರಿಸಿ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ : ಮಾನ್ಯ ಅಧ್ಯಕ್ಷರೆ, ಕಳೆದ 15 ದಿವಸಗಳಿಂದ ಹೋರಾಟ ಮಾಡುತ್ತಿದ್ದಾರೆ. ಅಲ್ಲಿಗೆ ಮಾನ್ಯ ಜವಳಿ ಸಚಿವರು ಭೇಟಿ ಕೊಟ್ಟಿದ್ದಾರೆ, ಸಕ್ಕರೆ ಸಚಿವರೂ ಕೂಡ ಸ್ಥಳಕ್ಕೆ ಭೇಟಿ ಕೊಟ್ಟು ರೈತರ ಹೋರಾಟದಲ್ಲಿ ಭಾಗಿಯಾಗಿದ್ದರು.

ಅಧ್ಯಕ್ಷರು : ಮಾನ್ಯ ದೊಡ್ಡನಗೌಡ ಗುಂಡನಗೌಡ ಪಾಟೀಲರೆ, ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಮಾತನಾಡಿ. ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ದಿವಸಗಳಿಂದ ಚಾಮರಾಜ ನಗರದಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಅಲ್ಲಿ ನೀರೆತ್ತುವ ಯಂತ್ರ ಕೆಟ್ಟು ಹೋಗಿದೆ. ನನಗೆ ಸರ್ಕಾರ ಭರವಸೆಯನ್ನು ಕೊಡುವವರೆಗೆ ಧರಣಿಯನ್ನು ಮಾಡುತ್ತೇನೆ.

ಇ. ಚಾಮರಾಜನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಒತ್ತಾಯಿಸಿ ಮಾನ್ಯ ವಾಟಾಳ್‌ನಾಗರಾಜ್‌ರವರಿಂದ ಧರಣಿ

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಬಂದು ಧರಣಿಗೆ ಕುಳಿತರು)

ಅಧ್ಯಕ್ಷರು : ನಾನು ನಿಂತಿದ್ದೇನೆ, ದಯಮಾಡಿ ಎಲ್ಲಾ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

2. ನಿಯಮ **69ರ ಮೇರೆಗೆ**

ವಿಷಯ:– ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬೋರ್‌ವೆಲ್‌ಗಳನ್ನು ದುರಸ್ತಿಗೊಳಿಸದಿರುವುದು ಹಾಗೂ ಸತತವಾಗಿ ವಿದ್ಯುತ್ ನೀಡದಿರುವುದರಿಂದ ಉಂಟಾಗಿರುವ ತೊಂದರೆಗಳ ಬಗ್ಗೆ .

ಶ್ರೀ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ಧರಣಿ ವಾಪಸ್ಸು ಪಡೆಯಬೇಕು.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಮಾನ್ಯ ಸಚಿವರು ಕುಡಿಯುವ ನೀರಿಗೆ ಸಂಬಂಧಪಟ್ಟಂತೆಯೇ ಉತ್ತರ ಕೊಡುತ್ತಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರೇ, ತಮ್ಮ ಸ್ಥಾನಕ್ಕೆ ಬನ್ನಿ. ಉತ್ತರದಿಂದ ಸಮಾಧಾನವಾಗದಿದ್ದರೆ, ನಂತರ ನಾವು ನಿಮ್ಮ ಜೊತೆಗೆ ಬರುತ್ತೇವೆ, ಈಗ ನೀವು ಬನ್ನಿ.

ಶ್ರೀ ಕೆ. ಶ್ರೀನಿವಾಸಗೌಡ: ಕುಡಿಯುವ ನೀರಿನ ವಿಷಯಕ್ಕೇ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿರುವುದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ನನ್ನ ವಿನಂತಿ ಎಂದರೆ, ದಯವಿಟ್ಟು ಅವರು ಅವರ ಸ್ಥಾನದಲ್ಲಿ ಕುಳಿತುಕೊಳ್ಳಬೇಕು. ಈ ಬಗ್ಗೆ ತಾವು ಆದೇಶ ಕೊಡಬೇಕು.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಮಾನ್ಯ ವಾಟಾಳ್ ನಾಗರಾಜ್‌ರವರೇ, ಈಗ ಸಚಿವರು ಉತ್ತರ ಕೊಡುತ್ತಿದ್ದಾರೆ. ಉತ್ತರವನ್ನು ಸಮರ್ಪಕವಾಗಿ ಕೊಡಲಿಲ್ಲ ಎಂದರೆ ನಾವೂ ನಿಮ್ಮ ಜೊತೆಯಲ್ಲಿ ಬರುತ್ತೇವೆ, ಈಗ ನೀವು ಬನ್ನಿ.

ಅಧ್ಯಕ್ಷರು: ಮಾನ್ಯ ಸದಸ್ಯರು ಈ ರೀತಿ ಮಾಡುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಪರಂಪರೆಯಲ್ಲ. ನೀವು ಹಿರಿಯ ಸದಸ್ಯರು, ಇತರರಿಗೆ ಮಾರ್ಗದರ್ಶಕರಾಗಿರಬೇಕು. ಈ ರೀತಿಯಾದರೆ ಸಭೆ ನಡೆಸುವುದು ನನಗೆ ಕಷ್ಟವಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಂತರ ಒಟ್ಟಿಗೆ ಧರಣಿ ಮಾಡೋಣ. ಈಗ ನೀವು ಬನ್ನಿ.

ಶ್ರೀ ಜಿ.ಎ.ಶ್ರೀರಾಮರೆಡ್ಡಿ: ಏನು ಉತ್ತರ ಕೊಡುತ್ತಾರೆಂದು ಕೇಳೋಣ ಬನ್ನಿ. ಆಮೇಲೆ ಎಲ್ಲರೂ ಒಟ್ಟಿಗೆ ಹೋಗೋಣ.

ಅಧ್ಯಕ್ಷರು: ದಯಮಾಡಿ ಎಲ್ಲರೂ ಸಹಕಾರ ಮಾಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಅಧ್ಯಕ್ಷರು: ಮಾನ್ಯ ಸಚಿವರು ಪ್ರಾರಂಭ ಮಾಡಿ.

ಶ್ರೀ ಬಿ.ಸತ್ಯನಾರಾಯಣ(ಗ್ರಾಮೀಣ ನೀರು ಸರಬರಾಜು ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು, ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು, ಶ್ರೀ ರಾಮರೆಡ್ಡಿಯವರು, ಜಯಪ್ರಕಾಶ ಹೆಗ್ಡೆಯವರು, ಹಿರಿಯರಾದ ರಮೇಶ್ ಕುಮಾರ್‌ರವರು ಇವರೆಲ್ಲರೂ ರಾಜ್ಯದಲ್ಲಿರುವ ಬರಗಾಲದ ಹಿನ್ನಲೆಯಲ್ಲಿ, ಅಂತರ್ಜಲ ಕುಸಿದಿರುವ ಸಂದರ್ಭದಲ್ಲಿ, ರಾಜ್ಯದಲ್ಲಿ ಕುಡಿಯುವ ನೀರಿನ ತೊಂದರೆ ವ್ಯಾಪಕವಾಗಿ ಪ್ರಾರಂಭವಾಗಿದೆ ಎನ್ನುವ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ತಂದಿದ್ದು, ಅದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ,ಹೊಸದಾಗಿ ಮಂತ್ರಿಯಾದ ನನಗೆ ಎಲ್ಲಾ ರೀತಿಯ ಸಲಹೆ ಸಹಕಾರಗಳನ್ನು ಕೊಟ್ಟು, ನನಗೆ ಒಂದು ಒಳ್ಳೆಯ ಅವಕಾಶವನ್ನು ಕೊಟ್ಟಿದ್ದಾರೆ. ಅಧ್ಯಕ್ಷರಾದ ತಾವೂ ಸಹ ಇದರ ಮಹತ್ವವನ್ನು ಅರಿತುಕೊಂಡು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಹಾಗಾಗಿ ತಮಗೂ ಸಹ ವಂದಿಸುತ್ತಿದ್ದೇನೆ. ಇವತ್ತು ರಾಜ್ಯದಲ್ಲಿನ ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿಜವಾಗಿಯೂ ಒಂದು ಜ್ವಲಂತ ಸಮಸ್ಯೆಯಾಗಿ ಪರಿಣಮಿಸಿರುವುದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡಿದೆ. ಇದನ್ನು ನಾವು ಎರಡು ರೀತಿಯಲ್ಲಿ ಬಗೆಹರಿಸಲು ಪ್ರಯತ್ನ ಮಾಡುತ್ತಿದ್ದೇವೆ. ಈಗ ಸಧ್ಯದಲ್ಲಿ ಕುಡಿಯುವ ನೀರಿಗೆ ಏನು